(೧೦) ರಾಜ್ಯದಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಸಿಮೆಂಟ್ ಕಂಬ ಮತ್ತು ತಂತಿಯನ್ನು ಒದಗಿಸುವುದು

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಅಂದಾಜು ಮಂಜೂರಾಗಿದ್ದು, ಸಿಮೆಂಟ್ ಕಂಬಗಳು ಮತ್ತು ಬೇಕಾದ ತಂತಿ ಅಭಾವದಿಂದ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದು ಕುಂಟಿತವಾಗಿದೆ, ಅಲ್ಲದೆ ವಿತ ನೀರಾವರಿ (ಕೊಡಲು) ಆಳವಡಿಸಲು ರೈತರು ಸಾಲಮಾಡಿ ಪಂಪುಸೆಟ್ಟುಗಳನ್ನು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದರೂ ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿಲ್ಲ. ಸಾಲ ಕಟ್ಟದ ರೈತರ ಆಸ್ತಿ ಹರಾಜಿಗೆ ಬರುವ ಸ್ಥಿತಿ ಉಂಟಾಗಿದೆ. ಆದ್ದರಿಂದ ವಿದ್ಯುಚ್ಛಕ್ತಿ ಒದಗಿಸಲು ಬೇಕಾಗುವ ಸಿಮೆಂಟ್ ಕಂಬ ಮತ್ತು ತಂತಿ ಇತರೇ ಸಾಮಾನು ಗಳನ್ನು ಒದಗಿಸಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಮಂತ್ರಿಗಳಿಂದ ಇದಕ್ಕೆ ಉತ್ತರ ವನ್ನು ತರಿಸಿಕೊಡುತ್ತೇನೆ.

(೧೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಭೂಮಿಯನ್ನು ಆಕ್ರಮಣ ಮಾಡಿದ್ದನ್ನು ಸಕ್ರಮ ಮಾಡುವುದು

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಡ ಕೃಷಿಕರು ಹಲವಾರು ವರ್ಷಗಳಿಂದ ಸರಕಾರಿ ಭೂಮಿಯಲ್ಲಿ ಮನೆ, ಕೃಷಿ, ನೀರಿಗೆ ಬಾವಿ, ಪಂಪುಸೆಟ್ಟುಗಳನ್ನು ಮಾಡಿಕೊಂಡು ಈ ಭೂಮಿಯಲ್ಲಿ ವಾಸಿಸುತ್ತಿದ್ದಾರೆ. ಈ ಜಮೀನು ಸುಮಾರು ೧೦ ಸೆಂಟ್ಸ್‌ನಿಂದ ೫ ಎಕರೆಯವರೆಗೆ ಅವರು ಸ್ವಾಧೀನ ಮಾಡಿಕೊಂಡು ಬಂದಿರುತ್ತಾರೆ. ಈ ದೆಸೆಯಲ್ಲಿ ಸರಕಾರವು ಬಡ ಕೃಷಿಕರ ಬೇಡಿಕೆಯಲ್ಲಿ ಪರಿಶೀಲಿಸಿ ಹಲವಾರು ವರ್ಷಗಳಿಂದ ಅವರ ಸ್ವಾಧೀನತೆಯಲ್ಲಿದ್ದ ಕೃಷಿ ಭೂಮಿ ಯನ್ನು ಅಂದರೆ ಅಕ್ರಮಣ ಭೂಮಿಯನ್ನು ಸಕ್ರಮಗೊಳಿಸುವ ಕಾನೂನು ಜಾರಿಗೆ ತಂದು ಅವರಿಗೆ ಕೂಡಲೇ ಹಕ್ಕು ಪತ್ರವನ್ನು ನೀಡಬೇಕಾಗಿ ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಏನು ವಿಚಾರವನ್ನು ಮಂಡಿಸಿರುತ್ತಾರೆ, ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಇದೆ. ಸಮಿತಿಯಿಂದ ರಿಪೋರ್ಟ್ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

(೧೨) ಹಾನಗಲ್ ತಾಲ್ಲೂಕು ಬಾಳಂಬೀಡ ಗ್ರಾಮದ ಮತದಾರರಿಂದ ಚುನಾವಣೆಗೆ ಬಹಿಷ್ಕಾರ

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ ಹಾನಗಲ್ ತಾಲ್ಲೂಕು ಮೂಲನಾಡ ತಾಲ್ಲೂಕ್ ಇರುವುದರಿಂದ ಈಗಿರುವ ೧೪ ಮಂಡಲಿಗಳ ಬದಲು ೧೮ ಮಂಡಲಗಳನ್ನು ಮಾಡಬೇಕಾಗಿತ್ತು. ಹಾಗೆ ಆಗದೆ ಇರುವುದರಿಂದ ಹಾನಗಲ್ ತಾಲ್ಲೂಕಿನ ಬಾಳಂಬೀಡ ಗ್ರಾಮದ ಮತದಾರರು ತಮ್ಮ ಗ್ರಾಮ ಮಂಡಲ ಆಗದೇ ಇರುವುದರಿಂದ ಚುನಾವಣೆಯನ್ನು ಬಹಿಷ್ಕರಿಸಿದ್ದನ್ನು ಗಮನಿಸಿ ಹೆಚ್ಚು ಮಂಡಲಿ ಗಳನ್ನು ಮಾಡಲು ಮಾನ್ಯ ಸಚಿವರು ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಮಂತ್ರಿಗಳಿಂದ ಅದಕ್ಕೆ ಉತ್ತರ ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಗ್ರಾಮಗಳಿಗೆ ಶಾಸಕರನ್ನು ಆಮಂತ್ರಣ ಮಾಡತಕ್ಕಂಥ ವಿಚಾರ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಮಾನ್ಯ ಸದಸ್ಯರು ಹೇಳಿರುವುದು ನಿಜ. ಅದರಲ್ಲಿ ಏನಾದರೂ ತಪ್ಪಿದ್ದರೆ ಅದನ್ನು ಸರಿಪಡಿಸುತ್ತೇನೆ.

(೧೩) ರಾಜ್ಯದಲ್ಲಿ ದರೋಡೆಕೋರರನ್ನು ಹಿಡಿಯಲು ಸೂಕ್ತ ವ್ಯವಸ್ಥೆ ಮಾಡುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಬಿಡೇ ಮಾಪರಿಯ ಹಲವಾರು ಕಡೆ ದರೋಡೆಗಳು ನಡೆದಿದ್ದು ಪೋಲೀಸ್ ಇಲಾಖೆಯಿಂದ ದರೋಡೆಕೋರರನ್ನು ಹಿಡಿಯಲು ವಿಶೇಷ ವ್ಯವಸ್ಥೆ ನಡೆದಿಲ್ಲ. ರಾಜ್ಯದ ಹೊರಗಡೆಯಿಂದ ಈ ಗುಂಪೇಗಾರರು ಬಂದು ಸಾರ್ವಜನಿಕರ

ಆಪ್ತಿಪಾಪ್ತಿಗಳನ್ನು ಪಾಗೂ ಜೀವಕ್ಕೆ ಅಪಾಯ ಮಾಡುತ್ತಿದ್ದು ಕೆಲವು ಕಡೆ ಗಂಭೀರವಾಗಿ ಗಾಯಗಳನ್ನು ಹಾಗೂ ಪ್ರಜ್ಞಾಹೀನವಾಗುವಂತೆ ಮನೆಯ ಮಾಲೀಕರಿಗೆ ಹಾಗೂ ಹೆಣ್ಣುಮಕ್ಕಳಿಗೆ ಪೆಟ್ಟುನ್ನು ಮಾಡಿರುತ್ತಾರೆ. ಈ ವಿಷಯವನ್ನು ವಿಶೇಷ ತನಿಖಾದಳಕ್ಕೆ ಕೊಟ್ಟು ಆಗುತ್ತಿರುವ ಅನಾಹುತವನ್ನು ತಡೆಹಿಡಿಯಬೇಕಾಗಿ ಈ ಸದನದ ಮುಖೇನ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಗೃಹಸಚಿವರು ಸಾಕಷ್ಟು ವಿವರಗಳನ್ನು ಈ ವಿಚಾರ ಬಗ್ಗೆ ಕೊಟ್ಟಿರುತ್ತಾರೆ.

(೧೪) ಕಿಂಕೋ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳಂ ದೊರೆಯದೆ ಇರುವುದು

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೆ. ಬೆಂಗಳೂರು ನಗರದ ಮೈಸೂರು ರಸ್ತೆಯಲ್ಲಿರುವ ಸರ್ಕಾರ ಸ್ವಾಮ್ಯದ ಕಿಂಕೋ ಕಾರ್ಖಾನೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೊಂದಿಗೆ ವಿಲೀನಗೊಳಿಸಬೇಕೆಂದು ಅಲ್ಲಿಯ ಹೆಚ್.ಎಂ.ಕೆ.ಪಿ. ನಿಯಂತ್ರಿಕ ಕಾರ್ಮಿಕ ಸಂಘವು ಎರಡು ವರ್ಷಗಳ ಕಾಲ ಸತತ ಹೋರಾಟ ನಡೆಸಿದ ಫಲವಾಗಿ ೨-೮-೮೬ರಂದು ಸರ್ಕಾರದ ಒಪ್ಪಿಗೆಯನ್ನು ನೀಡಿತು. ಈ ಕಾರ್ಯಕ್ಕಾಗಿ ನಾನು ಕೈಗಾರಿಕಾ ಸಚಿವರನ್ನು ಅಭಿನಂದಿಸುತ್ತೇನೆ. ಆದರೆ ಕಾರ್ಖಾನೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ವಿಲೀನಗೊಂಡ ಬಗ್ಗೆ ಸರ್ಕಾರ ಆಜ್ಞೆ ಹೊರಡಿಸಿದ್ದರೂ ಕಿಂಕೋ ಕಾರ್ಮಿಕರಿಗೆ ಸ್ವಾಭಾವಿಕವಾಗಿಯೇ ಸಿಗಬೇಕಾದ ಕೆಲವು ಸೌಲಭ್ಯಗಳು ದೊರಕುತ್ತಿಲ್ಲವೆಂಬ ಸಂಗತಿಯನ್ನು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ.

ತಮಗೆ ತಿಳಿದಹಾಗೆ ಕಳೆದ ೩ ವರ್ಷಗಳಿಂದ ಕಾರ್ಯಬಂಡಪಾಳೆ ಮತ್ತು ಕಚ್ಚಾ ಸಾಮಗ್ರಿಗಳಿಲ್ಲದೆ ಈ ಕಾರ್ಖಾನೆಯ ಉತ್ಪಾದನೆ ಕಡಿಮೆಯಾಗಿತ್ತು. ಕಳೆದ ವರ್ಷದ ಆಗಸ್ಟ್ ತಿಂಗಳ ಉತ್ಪಾದನೆಗಿಂತ ಈ ವರ್ಷದ ಜನವರಿಯ ಉತ್ಪಾದನೆಯು ೭ ಪಟ್ಟು ಅಧಿಕಗೊಂಡಿದೆ. ಹೀಗೆ ಕಾರ್ಮಿಕರು ಉತ್ಪಾದನೆಯನ್ನು ಅಧಿಕಗೊಳಿಸಲು ಪ್ರಯಾಣಿಕವಾಗಿ ದುಡಿಯುತ್ತಿದ್ದರೂ ಅವರಿಗೆ ದೊರೆಯಬೇಕಾದ ನ್ಯಾಯುತ ಸೌಲಭ್ಯಗಳನ್ನು ನೀಡುವಲ್ಲಿ ಕಿಂಕೋ ಆಡಳಿತ ವರ್ಗವು ಸಂಪೂರ್ಣವಾಗಿ ವಿಫಲಗೊಂಡಿದೆ. ಈ ಮಾತಿಗೆ ನಿದರ್ಶನವೆಂದರೆ ಕರ್ನಾಟಕ ಸರ್ಕಾರ ಕಳೆದ ಆಗಸ್ಟ್ ತಿಂಗಳಲ್ಲಿ ಬಿಡುಗಡೆ ಮಾಡಿದ ಎರಡು ತುಟ್ಟಿಭತ್ಯೆಯ ಎರಡು ಕಂತುಗಳನ್ನು ಈವರೆಗೂ ಬಿಡುಗಡೆ ಮಾಡಿಲ್ಲ. ಪ್ರತಿ ವರ್ಷ ಕಾರ್ಮಿಕರಿಗೆ ಕೊಡುತ್ತಿದ್ದ ''ಸಮವಸ್ತ್ರ ಹಾಗೂ ಪಾದರಕ್ಷೆ''ಗಳನ್ನು ಸಹ ವಿತರಿಸಿಲ್ಲ.

ಕಾರ್ಖಾನೆಯನ್ನು ಕೆ.ಎಸ್.ಆರ್.ಟಿ.ಸಿ.ಯಲ್ಲಿ ವಿಲೀನಗೊಳಿಸಿದ ಬಗ್ಗೆ ರಾಜ್ಯ ಸರ್ಕಾರದ ಆಜ್ಞೆ ಬಂದಿದೆಯೇ ಹೊರತು ಕೆ.ಎಸ್.ಆರ್.ಟಿ.ಸಿ.ಯಿಂದ ಯಾವುದೇ ಆದೇಶ ಬಂದಿಲ್ಲ. ಕಾರ್ಖಾನೆಯಲ್ಲಿ ಕೆ.ಎಸ್.ಆರ್.ಟಿ.ಸಿ.ಯ ವಾಹನಗಳಿಗೆ ಬಾಡಿ ಕಟ್ಟುವ ಕೆಲಸ ನಡೆಯುತ್ತಿದ್ದು ಅದಕ್ಕೆ ಬೇಕಾಗುವ ಕಚ್ಚಾವಸ್ತುಗಳನ್ನು ಮೇಲ್ಕಂಡ ಸಂಸ್ಥೆಯಿಂದ ಸಾಲ ರೂಪವಾಗಿ ಪಡೆಯುತ್ತಿದ್ದು, ಇದಕ್ಕಾಗಿ ಕಿಂಕೋ ಕಾರ್ಖಾನೆ ಕೆಎಸ್ಆರ್‌ಟಿಸಿಗೆ ೧ ಲಕ್ಷ ೫೫ ಸಾವಿರ ರೂ.ಗಳಷ್ಟು ಬಡ್ಡಿಯನ್ನು ನೀಡುತ್ತದೆ.

ಈ ಎಲ್ಲಾ ವ್ಯವಸ್ಥೆಯನ್ನು ಸರಿಪಡಿಸಿ ಅಲ್ಲಿಯ ಕಾರ್ಮಿಕರಲ್ಲಿ ವಿಲೀನದ ಬಗೆಗಿರುವ ಶಂಕೆಯನ್ನು ನಿವಾರಿಸಿ ಅವರಿಗೆ ನ್ಯಾಯಬದ್ಧವಾಗಿ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ತಮ್ಮ ಮೂಲಕ ಸನ್ಮಾನ್ಯ ಕೈಗಾರಿಕಾ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಾರಿಗೆ ಮಂತ್ರಿಗಳ ಪರವಾಗಿ ಈ ಹೇಳಿಕೆ ನೀಡುತ್ತಿದ್ದೇನೆ. ಕರ್ನಾಟಕ ಇಂಪ್ಲಿಮೆಂಟ್ಸ್ ಮತ್ತು ಮೆಷಿನರೀಸ್ ಕಂಪನಿಯನ್ನು (ಕಿಂಕೋ) ಕ.ರಾ.ರ.ಸಾ.ಸಂಸ್ಥೆಯ ಪೂರಕ ಉದ್ಯಮವನ್ನಾಗಿ ಪರಿವರ್ತಿಸಲು ಸರಕಾರವು ತತ್ವಶಃ ಒಪ್ಪಿಗೆ ನೀಡಿದೆ. ಇಂತಹ ಪರಿವರ್ತನೆಗೆ ಭಾರತ ಸರಕಾರದ ಅನುಮೋದನೆಯು ಅಗತ್ಯವಿದೆ. ಆದರೆ ಭಾರತ ಸರಕಾರದ ಮುಂದೆ ಇಂತಹ ಪ್ರಸ್ತಾಪವನ್ನು ಮಂಡಿಸುವ ಮೊದಲು ಕಿಂಕೋ ಸಂಸ್ಥೆಯ ಹಣಕಾಸು ಮತ್ತು ತಾಂತ್ರಿಕ ವಿಷಯಗಳ ಬಗೆಗೆ ಸಮರ್ಥನೆ ನೀಡಬೇಕಾಗುತ್ತದೆ. ಆದ ಕಾರಣ ಹಾಸನ ಮತ್ತು ಬೆಂಗಳೂರುಗಳಲ್ಲಿರುವ ಕಿಂಕೋ ಸಂಸ್ಥೆಯ ಕಾರ್ಯಗಾರಗಳಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಾಕಷ್ಟು ಕಾರ್ಯಭಾರವನ್ನು ಪಹಿಸುತ್ತಿದೆ. ಕಿಂಕೋ ಸಂಸ್ಥೆಗೆ ನಿರ್ವಹಣಾ ವೆಚ್ಚವನ್ನು ಮುಂಗಡವಾಗಿ ಸಾಲ ನೀಡುತ್ತಿದ್ದ ಒಂದು ಬ್ಯಾಂಕು ಕಳೆದ ಒಂದು ವರ್ಷದಿಂದೀಚೆಗೆ ಮುಂಗಡ ನೀಡಿಕೆಯನ್ನು ನಿಲ್ಲಿಸಿದ ಪ್ರಯುಕ್ತ, ಕಚ್ಚಾ ಸಾಮಗ್ರಿ, ನೌಕರರ ಸಂಬಳ ಇತ್ಯಾದಿ ವೆಚ್ಚಗಳನ್ನು ಭರಿಸುವ ಸಲುವಾಗಿ ಕ.ರಾ.ರ.ಸಾ.ಸಂಸ್ಥೆಯು ಕಿಂಕೋಗೆ ಮುಂಗಡ ಧನ ಸಹಾಯ ಮಾಡುವುದು ಅನಿವಾರ್ಯವಾಯಿತು.